<u>4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು</u>

ಸಿ.ಸಿ ನಂ- 15051/2018 **ಚಾ.ಸಾ.-3** **ಅ.ಸಾ.-** 2

**ಪ್ರ.ವ.ಬೊ. ದಿಃ** 05.02.2020

ಸಾಕ್ಷಿದಾರನ ಹೆಸರು : ಮಹೇಶ್

ತಂದೆಯ ಹೆಸರು : ಕುಪ್ಪಾಚಾರಿ

ವಯಸ್ಸು : 40 ವರ್ಷ

ಕೆಲಸ : ಖಾಸಗಿ ಕೆಲಸ

ವಾಸ : ಜಾಲಹಳ್ಳಿ, ಬೆಂಗಳೂರು

<u>ಮುಖ್ಯ ವಿಚಾರಣೆ ಹಿ.ಸಾ.ಸ.ಅ ರವರಿಂದಃ</u>

ಸಾಕ್ಷಿ ನಿ.ಪಿ.2 ರಲ್ಲಿರುವ ತಮ್ಮ ಸಹಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ನಿ,ಪಿ.2 ಕ್ಕೆ ಜಾಲಹಳ್ಳಿ ಗ್ರಾಮದ ಕೆಂಪೇಗೌಡ ಕಲ್ಯಾಣ ಮಂಟಪದ ಹಿಂದೆ ನಾಗಯ್ಯ ಕಟ್ಟಡದ ಹತ್ತಿರ ಚಾ.ಸಾ.1 ರವರು ವಾಸವಾಗಿದ್ದು, ಅಲ್ಲಿ ಪೊಲೀಸರು ಬಂದಿದ್ದು, ಆರೋಪಿ ಕೆಲಸ ಕೊಡಿಸುತ್ತೇನೆ ಎಂದು ಹೇಳಿ ಮೋಸ ಮಾಡಿ ದುಡ್ಡು ಪಡೆದಿದ್ದಾರೆ, online transaction ಮಾಡಿದ್ದಾರೆ ಎಂದು ಹೇಳಿ, ಸ್ಥಳದಲ್ಲಿ ಪಂಚನಾಮೆ ಮಾಡಿದ್ದು, ಪಂಚನಾಮೆ ಓದಿ ನೋಡಿ ಸ್ಥಳದಲ್ಲಿ ಸಹಿ ಹಾಕಿದ್ದೆ.

ಪಾಟೀ ಸವಾಲು ಶ್ರೀ ಟಿ.ಎನ್ ಆರೋಪಿ ಪರ ವಕೀಲರಿಂದಃ

ನನಗೆ ಪಿರ್ಯಾದಿಯ ಪರಿಚಯ ಇಲ್ಲ. ನನಗೆ ಪಿರ್ಯಾದಿಯ ಮನೆಗೆ ಯಾರೂ ಕರೆದುಕೊಂಡು ಹೋಗಿಲ್ಲ, ನಾನು ಅಲ್ಲಿ ಹೋಗುತ್ತಿದ್ದೆ. ಅಲ್ಲಿ ಹೋದಾಗ ವಿಷಯ ಹೇಳಿದ್ದು, ವಿಷಯ ತಿಳಿದು ಸಹಿ ಹಾಕಿದ್ದೆ. ಮಾಹಿತಿ ಕೊಟ್ಟ ಮೇರೆಗೆ ಪಂಚನಾಮೆಗೆ ನಾನು ಸಹಿ ಹಾಕಿದ್ದೆ. ಪೊಲೀಸರು ಪಂಚನಾಮೆ ಬರೆಯುವುದನ್ನು ನೋಡಿದ್ದೇನೆ. ಪಂಚನಾಮೆ ಕೈಯಲ್ಲಿ ಬೆದಿದ್ದರು, ನಂತರ ಅದರಲ್ಲಿ

ಸಹಿ ಹಾಕಿದ್ದೆ. ನಾನು ಸ್ಥಳಕ್ಕೆ ಹೋಗಿಲ್ಲ ಹಾಗೂ ಪಂಚನಾಮೆಗೆ ಸ್ಥಳದಲ್ಲಿ ಸಹಿ ಹಾಕಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು